ಶ್ರೀ ರಮೇಶ ಸಿ. ಜಿಗಜಿಣಗಿ.--ಮಾನ್ಯ ಅಧ್ಯಕ್ಷರೇ ನಾನು ಈಗ ಸ್ಪಷ್ಟವಾಗಿ ಹೇಳುವುದಕ್ಕೆ ಕಷ್ಟವಾಗುತ್ತದೆ. ಕೋರ್ಟಿನಿಂದ ತೀರ್ಮಾನ ಬಂದ ಮೇಲೆ ಸ್ಪಷ್ಟವಾಗಿ ತೆಗೆದುಕೊಂಡ ತೀರ್ಮಾನವನ್ನು ಈ ಮನೆಗೆ ತಿಳಿಸುತ್ತೇನೆ. ಮಾನ್ಯ ಸದಸ್ಯರು ಮಿನರಲ್ ಗೈಟ್ ಟ್ಯಾಕ್ಸ್ ಬಗ್ಗೆ ಪ್ರಶ್ನೆ ಕೇಳಿರಲಿಲ್ಲ. ರಾಯಲಿಟಿ ಬಗ್ಗೆ ಪ್ರಸ್ತಾಪ ಮಾಡಿದ್ದರು ಆದಕ್ಕೆ ಆ ರೀತಿ ಉತ್ತರ ಕೊಟ್ಟೆ.

ಪ್ರಶ್ನೆ ಸಂಖ್ಯೆ : ೧೯೪ (೮೩೫) ಮಾನ್ಯ ಸದಸ್ಯರು ಗೈರು ಹಾಜರಿ.

ತರೀಕೆರೆ ತಾಲ್ಲೂಕಿನ ಗ್ರಾಮಗಳಿಗೆ ವಿದ್ಯುತ್ ಸರಬರಾಜು

೮೫೦. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).--ಮಾನ್ಯ ರಾಜ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ಇನ್ನೂ ವಿದ್ಯುತ್ ಸರಬರಾಜು ಮಾಡ ಬೇಕಾಗಿದೆ.

ಆ) ಈ ತಾಲ್ಲೂಕಿನ ಬೇಚರ ಗ್ರಾಮಂಗಳಿಗೂ ವಿದ್ಯುತ್ ಸರಬರಾಜು ಮಾಡಲಾಗುವುದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).--

ಅ) ೧೯೭೧ರ ಜನಗಣತಿಯಂತೆ ವಿದ್ಯುದ್ದೀಕರಣವಾಗ ಬೇಕಾದ ಗ್ರಾಮಗಳಿಲ್ಲ. ೧೯೮೧ರ ಜನಗಣತಿಯಂತೆ ಇನ್ನೂ ೩ ಗ್ರಾಮಗಳು ವಿದ್ಯುದ್ದೀಕರಣವಾಗಬೇಕಾಗಿದೆ.

ಆ) ಬೇಚರ (ಜನವಸತಿ) ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡುವುದಿಲ್ಲ. ಕಾರಣ ವಿದ್ಯುತ್ ಬಳಸಿಕೊಳ್ಳಲು ಜನಗಳಿಲ್ಲ. ಜನ ವಾಸಿಸುವ ಗ್ರಾಮಗಳಿಗೆಲ್ಲಾ ವಿದ್ಯುತ್ ಸರಬರಾಜು ಮಾಡಲಾಗುತ್ತದೆ.

ಮಾನ್ಯ ಸದಸ್ಯರು ಒತ್ತಡ ಜಾಸ್ತಿ ತಂದರೆ ಬೇಚರ ಗ್ರಾಮಗಳಿಗೆ ಅಂದರೆ ಅಲ್ಲಿ ಮಂಟಪಗಳು ಏನಾದರೂ ಇದ್ದರೆ ಅಲ್ಲಿಗೆ ಒಂದು ಲೈಟ್ ಹಾಕಿಸಿ ಕೊಡುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ --ಮಾನ್ಯ ಅಧ್ಯಕ್ಷರೇ ೨೦ ಅಂಶದ ಕಾರ್ಯಕ್ರಮದ ಪಟ್ಟಿಯಲ್ಲಿ ಇನ್ನು ೧೪ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಕೊಡಬೇಕಾಗಿದೆ. ಆದರೆ ಇಲ್ಲಿ ಮಾನ್ಯ ಮಂತ್ರಿಗಳು ಮೂರು ಹಳ್ಳಿಗಳೆಂದು ಹೇಳಿದ್ದಾರೆ. ಇಲ್ಲಿ ಮಾನ್ಯ ಮಂತ್ರಿಗಳು ಕೊಟ್ಟಿರುವ ಗ್ರಾಮಗಳ ಹೆಸರಂಗಳು ಸಹ ತಪ್ಪು ಇವೆ. ಈ ವರದಿಯಿಂದಲೇ ಗೊತ್ತಾಗುತ್ತದೆ ಅಧಿಕಾರಿಗಳು ಎಷ್ಟು ಸುಲಭವಾಗಿ ಸ್ವಿಚ್ ಆಫ್ ಮಾಡುತ್ತಾರೆಂದು. ಇನ್ನು ೧೪ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜು ಆಗಬೇಕಾಗಿದೆ. ನಮ್ಮಲ್ಲಿ ೧೦-೧೫ ಬೇಚರಕಾ ಗ್ರಾಮಗಳು ಇವೆ. ಅಲ್ಲಿ ಸುಮಾರು ೩೦ ಕುಟುಂಬಗಳು ವಾಸ ಮಾಡುತ್ತಿದ್ದಾರೆ. ಈ ಹಳ್ಳಿಗಳಿಗೆ ಯಾವಾಗ, ಯಾವ ವರ್ಷ ವಿದ್ಯುಚ್ಛಕ್ತಿಯನ್ನು ಕಲ್ಪಿಸಿಕೊಡುತ್ತೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.--ಮಾನ್ಯ ಅಧ್ಯಕ್ಷರೇ ೧೯೮೧ನೇ ಇಸವಿಯ ಜನಗಣತಿಯ ಪ್ರಕಾರ ಗುರುತಿಸಲಾಗಿರುವ ಹಳ್ಳಿಗಳಿಗೆ ನಾವು ಸಿ.ಸಿ. ನಂಬರ್ ಸಹ ಕೊಟ್ಟಿದ್ದೇವೆ. ಆ ಹಳ್ಳಿಗಳೆಂದರೆ ಸಿದ್ದಕಾಡ ಹಳ್ಳಿ ಸಿ.ಸಿ. ನಂಬರು ೧೫೫ ಭರಮಂಪುರ ಸಿ.ಸಿ. ನಂಬರು ೨೪೬ ರಾಮಪುರ ಸಿ.ಸಿ. ನಂಬರು ೩೦.

ಅಧ್ಯಕ್ಷರು.-- ಮಾನ್ಯ ನೀಲಕಂಠಪ್ಪನವರು ಉಪಪ್ರಶ್ನೆಯನ್ನು ಕೇಳಿ.

ಶ್ರೀ ಬಿ ಆರ್. ನೀಲಕಂಠಪ್ಪ.--ಮಾನ್ಯ ಸಚಿವರು ಹೇಳಿದಂದರಲ್ಲಿ ನಮ್ಮ ತಾಲ್ಲೂಕಿನಲ್ಲಿ ಇಲ್ಲದ ಹೆಸರುಗಳು ಇವೆ. ಆ ಹಳ್ಳಿಗಳು ನಮ್ಮಲ್ಲಿ ಇಲ್ಲ. ಅಧಿಕಾರಿಗಳು ಹಳ್ಳಿಗಳ ಹೆಸರನ್ನು ಕೂಡ ತಪ್ಪಾಗಿ ಕೊಟ್ಟಿದ್ದಾರೆ. ಆ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಡಿ. ನಮ್ಮ ತಾಲ್ಲೂಕಿನಲ್ಲಿ ೨೪೦ ಹಳ್ಳಿಗಳು ಇವೆ ಮಾನ್ಯ ಸಚಿವರು ಕೊಟ್ಟ ೧೪ ಹಳ್ಳಿಗಳ ಪಟ್ಟಿಯೂ ಕೂಡ ಸರಿಯಾದ ಮಾಹಿತಿಯನ್ನು ಕೊಡಲಿಲ್ಲ, ಯಾವುದೋ ಹಳ್ಳಿಗಳ ಹೆಸರನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.--ಮಾನ್ಯ ನೀಲಕಂಠಪ್ಪನವರೇ, ನಿಮಗೆ ಸಚಿವರ ಉತ್ತರ ಬೇಕೆ ? ಬೇಡವೆ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸದಸ್ಯರು ಹೇಳುವ ಗ್ರಾಮಗಳು ಅಲ್ಲಿ ಇರಬಹುದು. ಆದರೆ ನಾವು ೧೯೮೧ನೇ ಇಸವಿಯ ಸೆನ್ಸಸ್‌ನಲ್ಲಿರತಕ್ಕಂಥದ್ದರ ಪ್ರಕಾರ ಅಲ್ಲಿಯ ಮೂರೂ ಗ್ರಾಮಗಳು ನಮ್ಮ ಲಿಸ್ಟ್‌ನಲ್ಲಿ ಇಪೆ ಎಂದು ಹೇಳಿದ್ದೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ.—ಅಧ್ಯಕ್ಷರೆ...

ಅಧ್ಯಕ್ಷರು.—ಮಾನ್ಯ ಸಚಿವರು ಹೇಳುವುದನ್ನು ಸ್ವಲ್ಪ ಕೇಳಿಕೊಂಡು ಆನಂತರ ನಿಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅಧಿಕಾರಿಗಳು ಇಂತಹ ಮಾಹಿತಿಯನ್ನು ಕೊಡುವಾಗ ಸರಿಯಾಗಿ ನೋಡಿ ವೆರಿಫೈ ಮಾಡಿಕೊಟ್ಟಿರುವುದರಿಂದ ಮತ್ತು ಅದರಲ್ಲಿ ಲೋಪದೋಷಗಳು ಇದ್ದರೆ ಅದನ್ನು ತಿದ್ದಿಕೊಳ್ಳಲು ಪರಿಶೀಲಿಸಲು ತಿಳಿಸುತ್ತೇನೆ. ಮಾನ್ಯ ಸದಸ್ಯರು ಹೇಳಿದಂತೆ ೧೪ ಗ್ರಾಮಗಳು ಇರಬಹುದು. ಅವುಗಳಿಗೂ ಕೂಡ ವಿದ್ಯುದೀಕರಣ ಮಾಡತಕ್ಕಂಥ ಒಂದು ವ್ಯವಸ್ಥೆ ಇದೆ. ೧೯೭೧ನೇ ಇಸವಿಯ ಸೆನ್ಸಸ್ ಪ್ರಕಾರ ತರೀಕೆರೆ ತಾಲ್ಲೂಕಿನಲ್ಲಿ ವಿದ್ಯುದೀಕರಣವಾಗ ಬೇಕಾದ ಗ್ರಾಮಗಳು ಇಲ್ಲ. ಮಾನ್ಯ ಸದಸ್ಯರು ಹೇಳುವ ಹಾಗೆ ಆ ಬೇಚಾರಾಕ ಗ್ರಾಮಗಳಲ್ಲಿ ಜನರು ಇನ್ನೂ ವಾಸವಾಗಿದ್ದಾರೆ, ಅದನ್ನು ಪರಿಶೀಲನೆ ಮಾಡಿ ನೋಡ ಬಹುದು. ಅಲ್ಲಿ ಜನರು ವಾಸ ಮಾಡುತ್ತಿಲ್ಲವಾದಲ್ಲಿ ಅಲ್ಲಿಗೆ ನಿಯಮಗಳ ರೀತ್ಯ ವಿದ್ಯುತ್ ವ್ಯವಸ್ಥೆಯನ್ನು ಮಾಡುವುದಿಲ್ಲ.

ಶ್ರೀ ಬಿ.ಆರ್. ನೀಲಕಂಠಪ್ಪ.—ಸಚಿವರು ಬೇಚಾರಾಕ ಗ್ರಾಮಗಳಲ್ಲಿ ಜನರು ವಾಸವಾಗಿದ್ದರೆ ಅಲ್ಲಿಗೂ ವಿದ್ಯುತ್ ಸರಬರಾಜು ಮಾಡುತ್ತೇವೆ ಎಂದು ಹೇಳಿದ್ದಾರೆ. ಒಂದು ತಪ್ಪು ಎಂದರೆ ಮಾನ್ಯ ಸಚಿವರು ಸೂಚಿಸಿದ ಮೂರು ಗ್ರಾಮಗಳಲ್ಲಿ ಆ ಪೆಸರಿನ ಗ್ರಾಮಗಳು ನಮ್ಮ ಊರಿನಲ್ಲಿ ಇಲ್ಲ. ಅದಕ್ಕಾಗಿ ಸಚಿವರು ಕೊಟ್ಟ ಮಾಹಿತಿಯು ಸರಿಯಾಗಿಲ್ಲ. ಅದನ್ನು ಬಿಟ್ಟು ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ ಅದಕ್ಕಾಗಿ ಅವರಿಗೆ ಧನ್ಯವಾದಗಳು.

ಶ್ರೀ ಜೆ. ಎಚ್. ಪಟೇಲ್.—ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳನ್ನು ನಾನು ನೋಡಿದ್ದೇನೆ, ಒಂದು ಪ್ರಶ್ನೆಯಲ್ಲಿ ಅವರು "ಈ ತಾಲ್ಲೂಕಿನ ಬೇಚರ ಗ್ರಾಮಗಳಿಗೂ ವಿದ್ಯುತ್ ಸರಬರಾಜು ಮಾಡಲಾಗುವುದೇ ಎಂದು ಹೇಳಿದ್ದಾರೆ. ಅಂದರೆ ಇದರ ಏನು ? ಜನರು ವಾಸ ಮಾಡದಿರುವ ಕಡೆಗಳಲ್ಲಿ ವಿದ್ಯುಚ್ಛಕ್ತಿ ಕೊಡುತ್ತೀರಾ ಎಂದು ಕೇಳಿದರೆ ಸಚಿವರು ಏನೆಂದು ಹೇಳಬೇಕು. ಆದರೂ ಕೂಡ ಮಾನ್ಯ ಸಚಿವರು ಕಷ್ಟಪಟ್ಟು ಉತ್ತರವನ್ನು ಹೇಳಿದರು. ಆದರೆ ಮಾನ್ಯ ಸದಸ್ಯರು ಪ್ರಶ್ನೆಯ ಅರ್ಥವನ್ನು ಮಾಡಿಕೊಳ್ಳಬೇಕು. ಬೇಚರ ಗ್ರಾಮ ಅಂದರೆ ಅಲ್ಲಿ ಜನವಾಸ ಇಲ್ಲದ ಗ್ರಾಮ ಎಂದು ಅರ್ಥ ಇರುವಾಗ, ಅಲ್ಲಿಗೂ ವಿದ್ಯುತ್‌ಕೊಡಿ ಎಂದರೆ ಹೇಗೆ ?

ಅಧ್ಯಕ್ಷರು. ಬೇಚರ ಗ್ರಾಮಗಳು ಅಂದರೆ ಏನು ಎಂದು ನಾನು ಹೇಳುತ್ತೇನೆ. ರಾಜ್ಯದಲ್ಲಿ ಬೇಚರ ಗ್ರಾಮಗಳು ಎಲ್ಲಾ ಕಡೆಗಳಲ್ಲಿಯೂ ಇವೆ. ಇದ್ದರೂ ಕೂಡ ಇತ್ತೀಚೆಗೆ ಅನೇಕ ಜನರು ಅಲ್ಲಿಗೆ ಹೋಗಿ ವಾಸ ಮಾಡುತ್ತಿದ್ದಾರೆ.

ಶ್ರೀ ಜೆ. ಎಚ್. ಪಟೇಲ್ —ಅಧ್ಯಕ್ಷರೇ. ಯಾವುದೇ ಇಂತಹ ಬೇಚರ ಗ್ರಾಮ ಸೆನ್ಸಸ್ ಲಿಸ್ಟ್‌ನಲ್ಲಿ ಬಂದು ಹೋದರೆ, ಮತ್ತೆ ಅದನ್ನು ಜನವಸತಿ ಗ್ರಾಮ ಎಂದು ಮಾಡಬೇಕಾದರೆ ಅಂತಹ ಗ್ರಾಮಗಳು ಮತ್ತೊಮ್ಮೆ ಸೆನ್ಸಸ್‌ಲಿಸ್ಟ್‌ನಲ್ಲಿ ಬಂದು ರವಿನ್ಯೂ ಇಲಾಖೆಯವರು ನಮಗೆ ಹೇಳಿದರೆ ಮಾತ್ರ ಅಲ್ಲಿ ನಾವು ಲೈನ್ ಹಾಕುವುದಕ್ಕೆ ವ್ಯವಸ್ಥೆ ಮಾಡಬಹುದು.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳುತ್ತಿರುವುದು, ಆ ಬೇಚರ ಗ್ರಾಮಗಳಲ್ಲಿಯೂ ಜನರು ವಾಸ ಮಾಡುತ್ತಿದ್ದಾರೆ ಎಂದು.

ಅಧ್ಯಕ್ಷರು.—ಈಗ ೮ನೇ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೆ ಸಂಖ್ಯೆ ೧೪೩ (೯೦೫) ಶ್ರೀ ಎನ್. ಎಂ. ಅಡ್ಯಂತಾಯ ಗೈರು ಹಾಜರು.